# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 207

ಮಾನ್ಯ ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್
(ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 06/07/2023

ಉತ್ತರಿಸುವ ಸಚಿವರು : ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿಗೆ ಸಮೀಪವಿರುವ ನಂದಿ ಗಿರಿಧಾಮವು ಪ್ರವಾಸಿಗರ ಆಕರ್ಷಣೀಯ ಕೇಂದ್ರವಾಗಿದ್ದು, ಈ ಗಿರಿಧಾಮಕ್ಕೆ ರೋಪ್-ವೇ ಅಳವಡಿಸುವ ಪ್ರಸ್ತಾವವು ಯಾವ ಹಂತದಲಿದೆ; | ನಂದಿ ಬೆಟ್ಟದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ರೋಪ್-ವೇ ಅಳವಡಿಸುವ ಯೋಜನೆಯ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (DBFOT) ಆಧಾರದ ಮೇಲೆ ನಂದಿ ಬೆಟ್ಟದಲ್ಲಿ ಪ್ರಯಾಣಿಕರ ರೋಪ್-ವೇಗಳ ಅಭಿವೃದ್ಧಿ ಮತ್ತು ಕಾರ್ಯಾಚರಣೆಗಾಗಿ ರೂ.9340.55 ಲಕ್ಷಗಳ ಅಂದಾಜು ಯೋಜನಾ ವೆಚ್ಚದಲ್ಲಿ 18(ಹದಿನೆಂಟು) ತಿಂಗಳ ನಿರ್ಮಾಣ ಅವಧಿಯನ್ನು ಒಳಗೊಂಡಂತೆ 30 ವರ್ಷಗಳ ರಿಯಾಯಿತಿ ಅವಧಿಗೆ ಖಾಸಗಿ ಪಾಲುದಾರರ ಆಯ್ಕೆಗೆ ಟೆಂಡರ್ ಅನ್ನು ಆಹ್ವಾನಿಸಲು ಸರ್ಕಾರದ ಆದೇಶ ಸಂಖ್ಯೆ: ಟಿಓಆರ್ 233 ಟಿಡಿಪಿ 2021, ದಿನಾಂಕ:23-02-2022ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಅದರಂತೆ, ದಿನಾಂಕ: 28-02-2022ರಂದು ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು. ಈ ಯೋಜನೆಗೆ ಆಯ್ಕೆಯಾದ ಬಿಡ್ಡುದಾರರು ಮೆ: ದಾಮೋದರ್ ರೋಪ್‌ವೇಸ್ & ಇನ್ಫ್ರಾ ಲಿಮಿಟೆಡ್ ಮತ್ತು ಮೆ: ಅಶೋಕ ಬಿಲ್ಡ್‌ಕಾನ್ ಲಿಮಿಟೆಡ್‌ನ ಒಕ್ಕೂಟವಾಗಿದೆ. ಆಯ್ಕೆಯಾದ ಬಿಡ್ಡುದಾರರು ಯೋಜನೆಯನ್ನು ಕೈಗೆತ್ತಿಕೊಳ್ಳಲು SPV(ವಿಶೇಷ ಉದ್ದೇಶದ ಕಂಪನಿ) M/s Dyanamicx Ropeway Private Limited ಅನ್ನು ಸಂಯೋಜಿಸಿದ್ದಾರೆ. ಪ್ರವಾಸೋದ್ಯಮ ಇಲಾಖೆಯಿಂದ M/s Dyanamicx Ropeway Private Limitedರವರೊಂದಿಗೆ ದಿನಾಂಕ:13-02-2023ರಂದು ರಿಯಾಯಿತಿ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ರೋಪ್-ವೇ ಜೋಡಣೆಯ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ) | ಗಿರಿಧಾಮಕ್ಕೆ ರೋಪ್-ವೇಯನ್ನು ಅಳವಡಿಸಿ ಪ್ರವಾಸೋದ್ಯಮವನ್ನು ಮತ್ತಷ್ಟು ಉತ್ತೇಜಿಸಲು ಸರ್ಕಾರ ಮುಂದಾಗುವುದೇ? | ಹೌದು. |

ಸಂಖ್ಯೆ: ಟಿಓಆರ್ 116 ಟಿಡಿವಿ 2023

(ಹೆಚ್.ಕೆ.ಪಾಟೀಲ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು